ಸಾಕ್ಷಿ ಯನ್ನು ದಿಃ 18.03.2026 ರಂದು  ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ  ಅರ್ಜಿದಾರರ ಪರ ವಕೀಲರಿಂದ**

1. ಅರ್ಜಿದಾರರು ಈ ಅರ್ಜಿಯನ್ನು ಜೀವನಾಂಶ ಕೋರಿ ಸಲ್ಲಿಸಿರುತ್ತಾರೆ. ಅರ್ಜಿದಾರರು ನನ್ನ ಪತ್ನಿ
2. ನನ್ನ ಹಾಗೂ ಅರ್ಜಿದಾರರ ದಾಂಪತ್ಯ ಜೀವನದಿಂದ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. ಅವರ ಹೆಸರು ಮನ್ವಿತ್ ಹಾಗೂ ಪೂರ್ವಿಕ. ಮನ್ವಿತ್ ಗೆ 14 ಹಾಗೂ ಪೂರ್ವಿಕನಿಗೆ 12 ವರ್ಷ.
3. ನಾನು ಅರ್ಜಿದಾರರನ್ನು ಮದುವೆಯಾದ ನಂತರ 15 ವರ್ಷ ಒಟ್ಟಿಗೆ ಇದ್ದೆವು. ಆದರೆ ಮದುವೆಯದ ನಂತರ ನಮ್ಮ ಸಾಂಸಾರಿಕ ಜೀವನ 5-6 ಮಾತ್ರ ವರ್ಷ ಚೆನ್ನಾಗಿತ್ತು.
4. ಯಾವ ವಿಚಾರಕ್ಕೆ ನಿಮಗೆ ಹಾಗೂ ಅರ್ಜಿದಾರರಿಗೆ ಮನಸ್ತಾಪ ಉಂಟಾಯಿತು ಎಂದರೆ, ಅವರು ನನ್ನ ತಂಗಿ ಬಾನಂತನಕ್ಕೆ ಬಂದಾಗ ಅವರ ಮಾನಂತನ ಮಾಡದೇ ಅವರನ್ನು ಎರಡೇ ದಿನಕ್ಕೆ ಕಳುಹಿಸಿಕೊಟ್ಟಿದದರು, ನನ್ನ ತಂಗಿ ಜೊತೆ ಜಗಳ ಮಾಡುವುದು, ನನ್ನ ತಂದೆ ತಾಯಿಗೆ ಮಾನಸಿಕ ಹಿಂಸೆ ನೀಡುವುದು, ಬಾಯಿಗೆ ಬಂದಂತೆ ಬೈಯುವುದನ್ನು ಮಾಡುತ್ತಿದ್ದರು ಹಾಗೂ ನನ್ನ ಮಕ್ಕಳಿಗೆ ಸರಿಯಾಗಿ ಅಡಿಗೆ ಮಾಡುತ್ತಿರಲಿಲ್ಲ ಹಾಗೂ ನಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ಸದರಿ ವಿಚಾರಗಳನ್ನು ನಿಮ್ಮ ತಕರಾರಿನಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ, ನನಗೆ ನನಪಿಲ್ಲ.
5. ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ.
6. ನನ್ನ ತಕರಾರು ಬರೆಯಲು ನಾನೇ ಮಾಹಿತಿ ನೀಡಿದ್ದೇನೆ. ಸದರಿ ತಕರಾರನ್ನು ಓದಿ ನಂತರ ನಾನು ಸಹಿ ಹಾಕಿದ್ದೇನೆ ಎಂದರೆ ಸರಿ.
7. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಬರೆದ ವಿಚಾರಗಳು ಗೊತ್ತಾ ಎಂದರೆ, ಮರೆತು ಹೋಗಿದೆ.
8. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಅರ್ಜಿದಾರುರು ಏಕಾಏಕಿ ಮನೆ ಬಿಟ್ಟು ಹೋದರು ಎಂದು ಬರೆಸಿದ್ದೀರಾ ಎಂದರೆ, ಹೌದು. ದಿಃ 02.09.2018 ರಂದು ಅವರು ಮನೆ ಬಿಟ್ಟು ಹೋಗಿದ್ದರು. ಸದರಿ ವಿಚಾರವನ್ನು ತಕರಾರಿನಲ್ಲಿ ಬರೆಸಿಲ್ಲ.
9. ಅವರು ಮನೆ ಬಿಟ್ಟು ಹೋದ ನಂತರ ಎಷ್ಟು ದಿನಗಳ ನಂತರ ಅವರ ಮನೆಗೆ ಹೋಗಿ ನೀವು ಕರೆದ್ದೀರಿ ಎಂದರೆ, ಅವರು ಮಕ್ಕಳನ್ನು ಮನೆಯಲ್ಲಿ ಬಿಟ್ಟು ಹೋಗಿ 15 ದಿನ ಬಿಟ್ಟು ಠಾಣೆಗೆ ಹೋಗಿ ದೂರು ನೀಡಿ ನಮ್ಮನ್ನು ಠಾಣೆಗೆ ಕರೆಸಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ತಕರಾರಿನಲ್ಲಿ ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ, ನೆನಪಿಲ್ಲ.

10. ಅವರು ಮನೆ ಬಿಟ್ಟು ಹೋದ ನಂತರ, ನೀವು ನಿಮ್ಮ ಕುಟುಂದವರು ಅಥವಾ ಗ್ರಾಮಸ್ಥರು ನ್ಯಾಯ ಪಂಚಾಯತಿ ಮಾಡಿಸಿದ್ದೀರಾ ಎಂದರೆ, ಅವರೇ ಸಾಲಿಗ್ರಾಮ  ಠಾಣೆಯಲ್ಲಿ ಕರೆಸಿ ಮಾಡಿಸಿದ್ದರು.

11. ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಅರ್ಜಿದಾರರ ಜೊತೆ ಪ್ರೀತಿಯಿಂದ ಬಾಳಲು ಯಾವ ದಿನಾಂಕದಂದು ಪ್ರಯತ್ನಪಟ್ಟಿದ್ದೀರಾ ಎಂದರೆ, ದಿನಾಂಕ ನೆನಪಿಲ್ಲ, ಸಾಲಿಗ್ರಾಮ ಠಾಣೆಯಲ್ಲಿ ಮಾತಾಡಿಸಿದ್ದೆವು. ಸದರಿ ಪ್ರಯತ್ನದಿಂದ ಒಂದಾಗಿದ್ದು ಉಂಟಾ ಎಂದರೆ, ನಂತರ ನಾನು ಒಮ್ಮೆ ಅವರ ಮನೆಗೆ ಕರೆದುಕೊಂಡು ಬರಲು ಹೋದಾಗ, ಅವರು ನಮ್ಮ ಮನೆಗೆ ಬರುವುದಿಲ್ಲ, ಬೇರೆ ಮನೆ ಮಾಡಿದರೆ ಮಾತ್ರ ಬರುವುದಾಗಿ ಹೇಳಿದ್ದರಿಂದ ನಾನು ವಾಪಸ್ ಬಂದೆ.

12. ಅರ್ಜಿದಾರರ ಮನೆಗೆ ಕರೆಯಲು ನಾನು ಒಬ್ಬನೇ ಹೋಗಿದ್ದೆ. ಅದರ ದಿನಾಂಕ ನನಗೆ ನೆನಪಿಲ್ಲ.

13. ನನ್ನ ಮಗ ಈಗ 9 ನೇ ತರಗತಿ ಮುಗಿಸಿದ್ದು, ಮಗಳು 7 ನೇ ತರಗತಿ ಓದುತ್ತಿದ್ದಾಳೆ. ಪೂರ್ವಿಕ್ ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ, ದೊಡ್ಡಕಾನಿಯಲ್ ನಲ್ಲಿ ಹಾಗೂ ಮಗನು ಮುರಾರ್ಜಿ ವಸತಿ ನಿಲಯ ಮೈಸೂರಿನಲ್ಲಿ ಓದುತ್ತಿದ್ದಾನೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ, ಅವರು ಮೊದಲು ಓದುತ್ತಿದ್ದ ಶಾಲೆಯ ದಾಖಲೆ ಹಾಜರುಪಡಿಸಿದ್ದೇನೆ.

14. ನಾನು ಮದುವೆಯಾದ ಸಮಯದಲ್ಲಿ ಮೊಬೈಲ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಕೆ.ಆರ್.ನಗರದಲ್ಲಿ ನವೀನ್ ಮೊಬೈಲ್ಸ್ ಎಂಬ ಬೇರೆಯವರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ.  ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸದರಿ ವಿಚಾರ ಬರೆಸಿದ್ದೀರಾ ಎಂದರೆ, ಅದು ಮದುವೆಯಾಗುವ ಹಿಂದೆ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಮದುವೆಯಾದ ನಂತರ ಒಂದು ವರ್ಷ ಅಲ್ಲೇ ಕೆಲಸ ಮಾಡುತ್ತಿದ್ದೆ.

15. ಮದುವೆಯಾದ ನಂತರ ಸ್ಟುಡಿಯೋ ಕೆಲಸ ಮಾಡುತ್ತಿದ್ದೆ.

16. ಸಾನ್ವಿ ಡಿಜಿಟಲ್ ಸುಟಡಿಯೋ ನೀವೇ ತೆರೆದ ಅಂಗಡಿ ಎಂದರೆ, 2015-16 ರಲ್ಲಿ ಮಾಡಿದ್ದೆ ಎಂದು ನುಡಿಯುತ್ತಾರೆ. ಸದರಿ ಸ್ಟುಡಿಯೋದಲ್ಲಿ ನಾನು ಒಬ್ಬನೇ ಕೆಲಸ ಮಾಡುತ್ತಿದ್ದೆ. ಸದರಿ ಸ್ಟುಡಿಯೋವನ್ನು ಕೆ.ಆರ್ ಪೇಟೆಯಲ್ಲಿ ತೆರೆದಿದ್ದೆ.

17. ಸಾಕ್ಷಿಗೆ ಒಂದು ಪೋಟೋ ತೋರಿಸಿ ಅದು ನೀವು ಪೇಸ್ ಬುಕ್ ನಲ್ಲಿ ಬರೆದುಕೊಂಡಿದ್ದು ಎಂದರೆ, ಸರಿ. ಸದರಿ ಪೋಟೋವನ್ನು ನಿಪಿ-9 ಎಂದು ಗುರುತಿಸಲಾಯಿತು.

18. ಸಾಕ್ಷಿಗೆ ಇನ್ನೊಂದು ಪೋಟೊ ತೋರಿಸಿ ಅದು ನೀವು ಕ್ಯಾಮರಾ ವನ್ನು ಖರೀದಿಸಿದ ಅಂಗಡಿ ಎಂದರೆ, ಸರಿ, ಸಾಕ್ಷಿ ಮುಂದುವರಿದು ಅದು ಕೋವಿಡ್ ಗಿಂತ ಮುಂಚೆ ಸಾಲ ಮಾಡಿ ಖರೀದಿ

ಮಾಡಿದ್ದು ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು ನಿಪಿ - 10 ಎಂದು ಗುರುತಿಸಲಾಯಿತು.

19. ಸಾಕ್ಷಿಗೆ ಇನ್ನೊಂದು ಪೋಟೋ ತೋರಿಸಿ ಅದು ನೀವು ಖರೀದಿ ಮೋಬೈಲ್ ಎಂದರೆ, ಸರಿ, ಸಾಲ ಮಾಡಿ 4 ತಿಂಗಳ ಹಿಂದೆ ಖರೀದಿ ಮಾಡಿದ್ದು ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು ನಿಪಿ - 11 ಎಂದು ಗುರುತಿಸಲಾಯಿತು.

20. ಸಾಕ್ಷಿಗೆ ಇನ್ನೊಂದು ಪೋಟೋ ತೋರಿಸಿ ಅದು ನೀವು ಜಿಮ್ ಗೆ ಹೋಗುವಾಗ ತೆಗೆದ ಪೋಟೊ ಎಂದರೆ, ಸರಿ, ಈಗ ಹೋಗುತ್ತಿಲ್ಲ 6 ವರ್ಷದ ಹಿಂದೆ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು ನಿಪಿ-12 ಎಂದು ಗುರುತಿಸಲಾಯಿತು.

21. ಕೆಎ.09.ಜೆಎಂ.9895 ಬೈಕ್ ನಿಮ್ಮದೇ ಎಂದರೆ ಸರಿ. ಸದರಿ ಪೋಟೋವನ್ನು ನಿಪಿ - 13 ಎಂದು ಗುರುತಿಸಲಾಯಿತು. ಸದರಿ ಬೈಕ್ ನಿಮ್ಮ ಹೆಸರಿನಲ್ಲಿದೆ ಎಂದರೆ ಸರಿ, ಸಾಲ ಮಾಡಿ ಖರೀದಿ ಮಾಡಿದ್ದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಪಿ - 14 ಎಂದು ಗುರುತಿಸಲಾಯಿತು.

22. ಕ್ಯಾಮರಾ ಖರೀದಿಸಲು ಸಾಲ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ, ಇಲ್ಲ, ಅದನ್ನು ಕೇಳಿಲ್ಲ ಎಂದು ನುಡಿಯುತ್ತಾರೆ.

23. ನಾನು ಖರೀದಿಸಿದ ಮೊಬೈಲ್ 38 ಸಾವಿರ ರೂಪಾಯಿಯದ್ದು. ಅದಕ್ಕೆ ಪ್ರತಿ ತಿಂಗಳು ಒಂದೂವರೆ ಸಾವಿರ ಖಂತು ಕಟ್ಟುತ್ತೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

24. ಬೈಕಿನ ಒಟ್ಟು ಮಾರುಕಟ್ಟೆ ಮೌಲ್ಯ ಎಷ್ಟು ಎಂದರೆ ನನಗೆ ನೆನಪಿಲ್ಲ. ಅದಕ್ಕೆ ಪ್ರತಿ ತಿಂಗಳು 3500-00 ಇಎಂಐ ಇದೆ. ಆ ಬಗ್ಗೆ ದಾಖಲೆ ಹಾಜರುಪಡಿಲ್ಲ.

25. ನನ್ನ ತಂದೆಯ ತಂದೆ ಹೆಸರು ಹುಚ್ಚ ವೀರೇಗೌಡ. ಅವರಿಗೆ ಮೂರು ಜನ ಮಕ್ಕಳು. ಹುಚ್ಚವೀರೇಗೌಡ ಬಿನ್ ಮಳ್ಳೇಗೌಡ ಎಂದರೆ ನನ್ನ ತಾತ ಎಂದರೆ ಸರಿ. ಅವರ ಹೆಸರಿನಲ್ಲಿ ಒಟ್ಟು 4 ಎಕರೆ ಜಮೀನು ಇದೆ. ಯಾವ ಸರ್ವೇ ನಂಬರ್ ನಲ್ಲಿ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ.

26. ಹುಚ್ಚವೀರೇಗೌಡ ರವರ ಮಕ್ಕಳು ಈಗ ಪ್ರತ್ಯೇಕ ಹಂಚಿಕೆ ಮಾಡಿಕೊಂಡು ಪ್ರತ್ಯೇಕ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾತ ಹಾಗೂ ಅಜ್ಜಿ ಇನ್ನೂ ಬದುಕಿದ್ದಾರೆ.

27. ನಮ್ಮ ತಂದೆ, ಚಿಕ್ಕಪ್ಪಂದಿರು ಒಟ್ಟು ಕುಟುಂಬದಲ್ಲಿ ಇದ್ದೀರಾ ಎಂದರೆ, ಬೇರೆ ಇದ್ದೇವೆ ಆದರೆ ಜಮೀನು ಈಗಲೂ ನನ್ನ ತಾತ ನೋಡಿಕೊಳ್ಳುತ್ತಿದ್ದಾರೆ.

28. ನಾನು ಸಮಾರಂಭಗಳಲ್ಲಿ ಪೋಟೋ ತೆಗೆಯಲು ಹೋಗುತ್ತೇನೆ. ನಾನು ಪೋಟೋಗ್ರಾಫರ್ ಎಂದು ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ.

29. ನನ್ನ ತಾತನಿಗೆ ಈಗ 65 ವರ್ಷ. ನನ್ನ ತಂದೆಗೆ ಈಗ ಎಷ್ಟು ವರ್ಷ ಎಂದು ನನಗೆ ಗೊತ್ತಿಲ್ಲ. ನನಗೆ ಈಗ 33 ವರ್ಷ.
30. ನಿಮ್ಮ ತಾನಿಗೆ ಈಗ 85 ಹಾಗೂ ನಿಮ್ಮ ಅಜ್ಜಿಗೆ 75 ವರ್ಷ ಎಂದರೆ ಸರಿಯಲ್ಲ. ಅವರ ಜಮೀನುಗಳನ್ನು ಈಗಾಗಲೇ ಅವರ ಮಕ್ಕಳು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.
31. ಸದರಿ ಜಮೀನುಗಳಲ್ಲಿ ನೀವು ತಂಬಾಕು ಹಾಗೂ ಶುಂಠಿ ಬೆಳೆಯುತ್ತೀರಾ ಎಂದರೆ, ನಮಗೆ ಜಮೀನು ಇಲ್ಲ ಎಂದು ನುಡಿಯುತ್ತಾರೆ.
32. ನನ್ನ ಹಾಗೂ ಅರ್ಜಿದಾರರ ಮದುವೆ ನಡೆದ ದಿನಾಂಕ ನನಗೆ ನಿಖರವಾಗಿ ಗೊತ್ತಿಲ್ಲ. ನಮ್ಮ ಮದುವೆ ಪಿರಿಯಾಪಟ್ಟಣದಲ್ಲಿ ನಡೆದಿದೆ.
33. ನಿಮ್ಮ ಹಾಗೂ ಅರ್ಜಿದಾರರ ಮದುವೆ ಕಮಲಮ್ಮ ಕರಿಗೌಡ ಕಲ್ಯಾಣ ಮಂಟಪ ಪಿರಿಯಾಪಟ್ಟಣದಲ್ಲಿ ಆಗಿದೆ ಎಂದರೆ ಇರಬಹುದು ನನಗೆ ನೆನಪಿಲ್ಲ. ಆ ಸಮಯದಲ್ಲಿ 1 ಲಕ್ಷ ಹಾಗೂ 100 ಗ್ರಾಂ ಚಿನ್ನವನ್ನು ವರದಕ್ಷಿಣೆಯಾಗಿ ನಿಮಗೆ ನೀಡಿದ್ದರು ಎಂದರೆ ಸರಿಯಲ್ಲ.
34. ಮದುವೆಯಾದ 4-5 ವರ್ಷ ಚೆನ್ನಾಗಿದ್ದು, ನಂತರ ನೀವು ಅರ್ಜಿದಾರರನ್ನು ಅನುಮಾನದಿಂದ ನೋಡುವುದು ಹಾಗೂ ಮಾನಸಿಕ ದೈಹಿಕ ಹಿಂಸೆ ನೀಡುವುದು ಪ್ರಾರಂಭ ಮಾಡಿದಿರಿ ಎಂದರೆ ಸರಿಯಲ್ಲ. ಆ ಸಲುವಾಗಿ ಮದುವೆಯದ 9 ವರ್ಷಗಳ ನಂತರ ಅರ್ಜಿದಾರರು ದಿ:05.01.2020 ರಂದು ನಿಮ್ಮ ಹಾಗೂ ನಿಮ್ಮ ಕುಟುಂಬದವರ ವಿರುದ್ಧ ದೂರು ನೀಡಿದ್ದರು ಎಂದರೆ, ನಾವು ಹಿಂಸೆ ನೀಡಿಲ್ಲ, ಅವರು ಮನೆ ಬಿಟ್ಟು ಹೋಗಿ 2 ವರ್ಷಗಳ ನಂತರ ಹೋಗಿ ಸುಳ್ಳು ದೂರು ನೀಡಿದ್ದರು ಎಂದು ನುಡಿಯುತ್ತಾರೆ. ಸದರಿ ಪ್ರಕರಣ ಈಗಾಗಲೇ ಕೆ.ಆರ್.ನಗರ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರೆ ಸರಿ.
35. ನಿಮ್ಮ ಹಾಗೂ ನಿಮ್ಮ ತಂದೆ ತಾಯಿ ಅರ್ಜಿದಾರರಿಗೆ ಹೆಚ್ಚಿನ ವರದಕ್ಷಿಣೆ ತರುವಂತೆ ಹಲ್ಲೆ ಮಾಡಿದ್ದರಿಂದ ಅವರು ಪಿರಿಯಾಪಟ್ಟಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು ಎಂದರೆ, ಅವರು ಹೇಳದೇ ಕೇಳದೇ ಮನೆ ಬಿಟ್ಟು ಹೋಗಿದ್ದರು ಎಂದು ನುಡಿಯುತ್ತಾರೆ. ಆ ಸಲುವಾಗಿ ದೂರು ನೀಡಿದ್ದೀರಾ ಎಂದರೆ, ನಾನು ದೂರು ನೀಡಲು ಹೋದಾಗ ಠಾಣೆಯಲ್ಲಿ ಪಡೆದಿಲ್ಲ ಎಂದು ನುಡಿಯುತ್ತಾರೆ. ಸದರಿ ದೂರಿನ ಪ್ರತಿಯನ್ನು ಹಾಜರುಪಡಿಸಿಲ್ಲ.
36. ನೀವು ಹೇಳುವಂತೆ ಅರ್ಜಿದಾರರು ಮನೆ ಬಿಟ್ಟು ಬಂದಿಲ್ಲ, ನೀವು ಪ್ರತಿನಿತ್ಯ ಯಾವುದೇ ಕೆಲಸ ಮಾಡದೇ ಎಲ್ಲಾ ಕೆಲಸಗಳನ್ನು ಅರ್ಜಿದಾರರು ಮಾಡಿಕೊಂಡು ನಿಮ್ಮ ತಂದೆ ತಾಯಿಯೊದಿಗೆ ಚೆನ್ನಾಗಿದ್ದರು ಎಂದರೆ ಸರಿಯಲ್ಲ.
37. ನೀವು ಅತಿಯಾದ ಮಧ್ಯಪಾನ ಮಾಡುವುದನ್ನು ಅವರು ಪ್ರಶ್ನೆ ಮಾಡಿದಾಗ ಅವರಿಗೆ ನೀವು

ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದ್ದೀರಿ ಎಂದರೆ ಸರಿಯಲ್ಲ.

38. ಅರ್ಜಿದಾರರು ಮನೆ ಬಿಟ್ಟು ಹೋದಾಗ ಅವರು ಮಕ್ಕಳನ್ನು ನಮ್ಮ ಬಳಿ ಬಿಟ್ಟು ಹೋಗಿದ್ದರು. ಆಗ ಮಕ್ಕಳಿಗೆ 7 ಹಾಗೂ 6 ವರ್ಷ ಆಗಿತ್ತು.
39. ಅರ್ಜಿದಾರರು ನಿಮ್ಮ ಮಾನಸಿಕ ಕಿರಕುಳ ತಾಳಲಾರದೇ ಮಕ್ಕಳನ್ನು ಕರೆದುಕೊಂಡು ಹೋಗಿದ್ದರೂ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
40. ನೀವು ಹೋಗಿ ಮಕ್ಕಳಿಗೆ ಪುಸಲಾಯಿಸಿ ವಾಪಸ್ ಕರೆದುಕೊಂಡು ಹೋಗಿದ್ದೀರಿ ಎಂದರೆ ಸರಿಯಲ್ಲ. ನಂತರ ಅರ್ಜಿದಾರರು ಹಲವಾರು ಬಾರಿ ಬಂದು ಮಕ್ಕಳನ್ನು ಕಳುಹಿಸಿಕೊಡುವಂತೆ ಕೇಳಿಕೊಂಡಿದ್ದರೂ ನೀವು ಮಕ್ಕಳನ್ನು ಕಳಿಸಿಕೊಟ್ಟಿಲ್ಲ ಎಂದರೆ, ಮಕ್ಕಳು ನಮ್ಮನ್ನು ಬಿಟ್ಟು ಹೋಗಿಲ್ಲ ಎಂದು ನುಡಿಯುತ್ತಾರೆ.
41. ನನಗೆ ಸಮಾರಂಭಗಳು ಇದ್ದಾಗೆ ಮಾತ್ರ ಕೆಲಸ ಇರುತ್ತದೆ. ಕೆಲಸ ಇದ್ದಾಗ ದಿನಕ್ಕ 600-700 ಆದಾಯ ಬರುತ್ತದೆ.
42. ಮದುವೆ ಸಮಾರಂಭಗಳು ಯಾವಾಗಲೂ ನಡೆಯತ್ತವೆ ಎಂದರೆ ಸರಿ. ಆದರೆ ನಮಗೆ ಪ್ರತಿದಿನ ಕೆಲಸ ಸಿಗುವುದಿಲ್ಲ.
43. ಸಾಮಾನ್ಯವಾಗಿ ಜೀವನ ನಡೆಸಲು ಒಬ್ಬರಿಗೆ ತಿಂಗಳಿಗೆ ಎಷ್ಟು ಖರ್ಚಾಗುತ್ತದೆ ಎಂದರೆ, 3-4 ಸಾವಿರ ಬೇಕಾಗಬಹುದು.
44. ನೀವು ಪೋಟೋಗ್ರಫಿ ಹಾಗೂ ವ್ಯವಸಾಯದಿಂದ 8-10 ಲಕ್ಷ ಆದಾಯ ಗಳಿಸುತ್ತೀರಾ ಎಂದರೆ ಸರಿಯಲ್ಲ.
45. ಅರ್ಜಿದಾರರು ಕೋರಿರುವ ಜೀವನಾಂಶ ಕೊಡಬೇಕಾಗುತ್ತದೆ ಎಂದು ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ